CC 640/2016
PW-1 Dated:18-02-2026.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಆರ್ ಐ ವಕೀಲರಿಂದ:

ನಮ್ಮ ತಂದೆಯ ಹೆಸರು ಮಲ್ಲಪ್ಪ. ನಮ್ಮ ತಂದೆಗೆ ಇಬ್ಬರು ಅಕ್ಕ ತಂಗಿಯರು ಹಾಗೂ ಇಬ್ಬರು ಅಣ್ಣ ತಮ್ಮಂದಿರು. ಸರ್ವೆ ನಂ.31/1ಬಿ ನೇದ್ದರಲ್ಲಿ ನಮ್ಮ ಮತ್ತು ಆರೋಪಿತರ ಪಿತ್ರಾರ್ಜಿತ ಆಸ್ತಿ ಇತ್ತು ಎಂದರೆ ಸರಿ. ನನ್ನ ಅತ್ತೆ ಗುಂಡಮ್ಮ ಅವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಸದರಿಯವರು ತನ್ನ ಪಾಲಿಗೆ ಬಂದಂತಹ ಆಸ್ತಿ 2 ನೇ ಆರೋಪಿತನಿಗೆ ಬರೆದುಕೊಟ್ಟಿದ್ದರು ಎಂದರೆ ಸರಿಯಿಲ್ಲ. ಅದೇ ರೀತಿ ರತ್ನಮ್ಮ ಎಂಬುವವಳು ನಮ್ಮ ತಮ್ಮನಾದ ಮಲ್ಲಪ್ಪ ಇವರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನಾವು ಖರೀದಿ ಮಾಡಿದ್ದೆವು ಎಂದು ನುಡಿಯುತ್ತಾರೆ. 5 ನೇ ಆರೋಪಿತರ ಪಾಲಿಗೆ ಬಂದ ಆಸ್ತಿಯನಲ್ಲು ಪಡೆದುಕೊಳ್ಳುವ ದುರುದ್ದೇಶದಿಂದ ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಿಲ್ಲ. ಸಾಕ್ಷಿಯು ಮುಂದುವರೆದು 2 ನೇ ಆರೋಪಿತನು ಎರಡು ಹೆಣ್ಣು ಮಕ್ಕಳು ಇಟ್ಟುಕೊಂಡು ಎಲ್ಲಾ ಆಸ್ತಿಯನ್ನು ನುಂಗಬೇಕು ಎಂದು ಕೇಳು ಮಾಡಿದರು ಎಂದು ನುಡಿಯುತ್ತಾರೆ. 5 ನೇ ಆರೋಪಿತರ ಆಸ್ತಿಯನ್ನು ತೆಗೆದುಕೊಳ್ಳಬೇಕು ಎಂದು ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಿಲ್ಲ. ಸದರಿ ಜಗಳ ಬೆಳಿಗ್ಗೆ 05-30 ಗಂಟೆಯಿಂದ 06-30 ಗಂಟೆಯ ವರೆಗೆ ಆಗಿರಬಹುದು. ನಮ್ಮೂರು ಸೇಡಂ ದಿಂದ 10 ಕಿ ಮಿ ಅಂತರದಲ್ಲಿದೆ. ನಾವು ಘಟನೆ ಆದಾಗ ಸರ್ಕಾರಿ ದವಾಖಾನೆಗೆ ಹೋಗಿದ್ದೆವು.

ದಿ.09-03-2016 ರಂದು ಬೆಳಿಗ್ಗೆ 06-00 ಗಂಟೆ ಸುಮಾರಿಗೆ ನಾನು ಮತ್ತು ಚಾ ಸಾ 4, 6 ಮತ್ತು 7 ನಮ್ಮ ಮನೆಯಲ್ಲಿ ಕುಳಿತುಕೊಂಡಾಗ ಆರೋಪಿತರೆಲ್ಲಾರೂ ಬಂದು ನಮಗೆ ರಂಡಿ ಮಗನೆ, ಸೂಳೆ ಮಗನೆ ಅಂತಾ ಅವಾಚ್ಯವಾಗಿ ಬೈಯುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾವು ಸುಮ್ಮ ಸುಮನೆ ನಮಗೆ ಯಾಕೆ ಬೈಯುತಿದ್ದೀಯಾ ಅಂತಾ ಕೇಳಿದಕ್ಕೆ ಆಗ 2 ನೇ ಆರೋಪಿತನು ನನಗೆ ಎದುರು ಮಾತನಾಡುತ್ತೀ ಸೂಳೆ ಮಗನೆ ನಿನಗೆ ಸಾಯಿಸುಬಿಡುತ್ತೇನೆ ಎಂದು ಹೇಳಿದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ಅಲ್ಲೆ ಬಿದ್ದ ಒಂದು ಕಟಿಗೆಯನ್ನು ತೆಗೆದುಕೊಂಡು ನನ್ನ ತಲೆಗೆ ಹೊಡೆದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ 1 ನೇ ಆರೋಪಿತನು ಕಲ್ಲಿನಿಂದ ನನ್ನ ಬೆನ್ನಿನಲ್ಲಿ ಮತ್ತು ತಲೆಗೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅಷ್ಟರಲ್ಲಿ 3 ನೇ ಆರೋಪಿತನು ಬಂದು ಕೈಯಿಂದ ಮುಖಕ್ಕೆ

ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ಚಾ ಸಾ 4 ಮತ್ತು 5 ರವರು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಮತ್ತು ಈ ಸೂಳೆ ಮಕ್ಕಳದು ಬಹಳಾ ಆಗಿದೆ ಸಾಯಿಸಿ ಬಿಡಿರಿ ಅಂತಾ ಹೇಳಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಚಾ ಸಾ 6 ಮತ್ತು 7 ರವರು ಮನೆಯಿಂದ ಹೊರಗಡೆ ಬಂದಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ 3 ನೇ ಆರೋಪಿತನು ಚಾ ಸಾ 7 ರವರಿಗೆ ಕೈಯಿಂದ ಹೊಡೆದಿದ್ದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ 1 ನೇ ಆರೋಪಿತನು ಚಾ ಸಾ 4 ರವರಿಗೆ ಕಲ್ಲಿನಿಂದ ಹೊಡೆದನು. ಆಗ 1 ನೇ ಆರೋಪಿತನು ನನ್ನ ತಾಯಿಯ ಸೀರೆ ಮತ್ತು ಕುಪ್ಪಸವನ್ನು ಹಿಡಿದುಕೊಂಡು ಎಳೆದಾಡಿದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಜಗಳ ಆದಾಗ ನಮ್ಮ ತಲೆಯಿಂದ ರಕ್ತ ಸೋರುತ್ತಿರುವುದರಿಂದ ನನ್ನ ಮೈಯಲ್ಲಿ ಎಲ್ಲಾ ರಕ್ತ ಆಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಯು ರಕ್ತ ಬಿದ್ದಿದ್ದ ಅಂಗಿಯನ್ನು ಮತ್ತು ಪ್ಯಾಂಟ್‌ನ್ನು ತೋರಿಸಿರುತ್ತಾರೆ. ಆಗ ಚಾ ಸಾ 5 ರವರು ಬಂದು ಜಗಳ ಬಿಡಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾವು ಸೇಡಂ ಪೊಲೀಸ್ ಠಾಣೆಗೆ ಬಂದಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಪೋಲೀಸರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆರೋಪಿತರ ವಿರುದ್ದ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಮು ಮಾ ಗೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

CC 640/2016
PW-2 Dated:18-02-2026.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ:

ನನ್ನ ಮತ್ತು ಆರೋಪಿತರ ಮನೆ ಸಮೀಪದಲ್ಲಿ ಇರುತ್ತದೆ. ನಾನು ಬೆಳಿಗ್ಗೆ 06-00 ಗಂಟೆ ಸುಮಾರಿಗೆ ಸೆಂಡಾಸ್ ಗೆ ಹೋಗುತ್ತಿರುವಾಗ ನನಗೆ ಜಗಳದ ಬಗ್ಗೆ ಗೊತ್ತಾಗಿದೆ. ಸದರಿ ಜಗಳವನ್ನು ನಾನು ಕಣ್ಣಾರೆ ನೋಡಿರುತ್ತೇನೆ. 2 ನೇ ಆರೋಪಿತನು ಬಡಿಗೆಯಿಂದ ಚಾ ಸಾ 1 ರವರಿಗೆ ಹೊಡೆಯುತ್ತಿದ್ದನು. 1 ನೇ ಆರೊಪಿತನು ಕಲ್ಲಿನಿಂದ ಚಾ ಸಾ 1 ರವರಿಗೆ ಹೋಡೆಯುತ್ತಿದ್ದನು. ಜಗಳ ಆದ ನಂತರ ಚಾ ಸಾ 1 ರವರು ಎಲ್ಲಿ ಹೋದ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಭೇಟಿಯಾಗಿಲ್ಲ ಮತ್ತು ಹೇಳಿಕೆಯನ್ನು ನೀಡಿಲ್ಲ. ಸಾಕ್ಷಿಯು ಮುಂದುವರೆದು ನಾನು ಬರೇ ಜಗಳ ಬಿಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ಸುಮಾರು 09 ವರ್ಷಗಳ ಹಿಂದೆ ಬೆಳಿಗ್ಗೆ 06-00 ಗಂಟೆಗೆ ಚಾ ಸಾ 1 ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಾನು ಚಾ ಸಾ 1 ರವರ ಮನೆಯ ಪಕ್ಕದಲ್ಲಿಂದ ಬೈಹಿರ್ ದೆಸೆಗೆ ಹೋಗುತ್ತಿದ್ದಾಗ ಆರೋಪಿತರು ಮತ್ತು ಚಾ ಸಾ 1 ರವರು ಜಗಳ ಆಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ 2 ನೇ ಆರೋಪಿತನು ಬಡಿಗೆಯಿಂದ ಚಾ ಸಾ 1 ರವರಿಗೆ ಹೋಡೆಯುತ್ತಿದ್ದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ 3 ನೇ ಆರೋಪಿತನು ಕಲ್ಲಿನಿಂದ ಚಾ ಸಾ 1 ರವರ ತಲೆಗೆ ಹೋಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾನು ಜಗಳ ಬಿಡಿಸಿಕೊಂಡು ಮನೆಗೆ ಹೋಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಚಾ ಸಾ 1 ರವರು ಆಸ್ಪತ್ರೆಗೆ ಹೋದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನನಗೆ ಸಾಕ್ಷಿ ನುಡಿದರೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಾನು ಚಾಸಾ 1 ರವರು ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಮು ಮಾ 1 ಮತ್ತು 2 ಸಾಮಾನ್ಯವಾಗಿ ಎಲ್ಲಾ ಕಡೆ ಲಭ್ಯ ಇರುತ್ತದೆ ಎಂದರೆ ಸರಿ. ಮು ಮಾ ಹಾಗೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

CC 640/2016
PW-3 Dated:18-02-2026.

**ಪಾಟೀಸವಾಲು:** ಆರೋಪಿ ಪರ ವಕೀಲರಿಂದ:

ಘಟನಾ ಸ್ಥಳಕ್ಕೆ ನಾನು ಹೋಗಿದ್ದೆ. ನನಗೆ ಯಾರು ಕರೆದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನಿ ಪಿ 2 ರಲ್ಲಿ ಏನು ಬರೆದಿದ್ದಾರೆ ನನಗೆ ಓದಿ ಹೇಳಿಲ್ಲ ಸಹಿ ಮಾಡಿರಿ ಅಂತಾ ಹೇಳಿದಕ್ಕೆ ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ.

ನಾನು ಸದರಿ ದಾಖಲಾತಿಗೆ ಸುಮಾರು 8 ರಿಂದ 9 ವರ್ಷಗಳ ಹಿಂದೆ ಹೆಬೆಟ್ಟಿನ ಗುರುತು ಹಾಕಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಪೋಲೀಸರು ಬಂದು ಪಂಚನಾಮೆ ಮಾಡಿ ಒಂದು ಬಡಿಗೆ ಮತ್ತು ಒಂದು ಕಲ್ಲನ್ನು ವಶಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಪಂಚನಾಮೆಯನ್ನು ಸಂಜೆ 04-00 ರಿಂದ 05-00 ಗಂಟೆಯ ವರೆಗೆ ಜರುಗಿಸಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**